ಇವಳಿಲ್ಲಿ ಬಂದಳು? ಎಂದುಕೊಳ್ಳುವಷ್ಟರಲ್ಲಿ ನಸ್ರೀನ್ ಒಳ ಬಂದಾಗಿತ್ತು. ಪ್ರಾರ್ಥನೆಯ ವೇಳೆಯೊಂದು ನೆಪವಾಗಿ ಬಂದವಳನ್ನು ಒಳಕರೆಯುವ ಪಡಿಪಾಟಲು ತಪ್ಪಿತೆಂದುಕೊಂಡಳು. ಅವಳತ್ತ ಗಮನವೇ ಇಲ್ಲದಂತೆ, 'ಇಲ್ಲಿಲಾಹ ರಸುಲ್...' ಎಂದು ತುಟಿಗಳು ಯಾಂತ್ರಿಕವಾಗಿ ಉಚ್ಚರಿಸತೊಡಗಿದವು. ಬಾಂಗ್‌ನ ದನಿಮುಗಿವ ವೇಳೆ ನಾಟಕಕ್ಕೆ ಅಂತ್ಯ ಹಾಡಲೇ ಬೇಕಾದ ಅನಿವಾರ್ಯತೆಯಿಂದ ಬಿಗಿದ ತುಟಿಯನ್ನು ತುಸು ಅಗಲಿಸಿ ಬಲವಂತದ ನಗೆ ನಕ್ಕು, 'ಹೇಗಿದ್ದೀಯ? ಮಕ್ಕಳು ಹುಷಾರ?' ಎಂದು ಕೇಳಿದಳು. 'ಹುಂ ಆಪ ನೀವು ಹೇಗಿದ್ದೀರ? ನೂರಿ ಹೇಗಿದ್ದಾಳೆ' ಎಂದು ನಾಟಕ ಮುಂದುವರಿಸಿದಳು. 'ಅದೇನು ಇದ್ದಕ್ಕಿದ್ದಂಗೆ?' ಎಂದು ನೇರ ದಾಳಿ ಮಾಡಿದವಳ ಕಣ್ಣನ್ನೇ ನೋಡುತ್ತಾ, 'ಬರೋ ಸಂದರ್ಭ ಬಂದ್ರೆ ಬರಲೇಬೇಕಾಗುತ್ತಲ್ಲ...' ಎಂದಳು ಮಾರ್ಮಿಕವಾಗಿ. 'ಗುಲ್ನಾರ್ ಏನಾರು ದೊಡ್ಡವಳಾದಳ?' ಎಂದು ಕೇಳಿದವಳನ್ನು ತಡೆಯುತ್ತಾ, 'ಅಯ್ಯೋ ಅದೆಲ್ಲ ಅಲ್ಲ. ನಮ್ಮ ಮಿಯಾ ಮಾಡಿರೋ ಹರಕತ್ತು ಕತ್ತಿಗೆ ಬಂದಿದೆಯಲ್ಲ!' ಎಂದಳು ದುಬ್ಬಿಯಿಂದ. 'ಅಂಥದ್ದೇನಾಯ್ತು?' ಎಂದು ಕಾತುರದಿಂದ ಕೇಳಿದವಳಿಗೆ, 'ಇವತ್ತು ಪೆನ್‌ಶನ್ ತಗೋಳಕ್ಕೆ ಹೋಗಿದ್ದೆ, ಈ ಸಾರಿ ಕಮ್ಮಿ ಪೆನ್‌ಶನ್ ಬಂದಿದೆ ಆಪ... ಯಾಕೇಂತ ಕೇಳಿದೆ, ಯಾರೋ ಖತೀಜಾ ಅನ್ನೋಳು ಅರ್ಜಿ ಕೊಟ್ಟಳಂತೆ. ಕೋರ್ಟಿಂದ ಆದೇಶ ಬಂದಿದೆಯಂತೆ. ಅವಳೂ ಕೂಡ ನಮ್ಮ ಮಿಯಾನ ಶಾದಿಶುದಾ ಬೀಬಿಯಂತೆ. ನಂಗೆ ಗೊತ್ತೇ ಇರ್ಲಿಲ್ಲ... ಇರೋ ಪೆನ್‌ಶನ್‌ನಲ್ಲಿ ಮೂರು ಪಾಲಾಗುತ್ತಂತೆ. ಮೊದಲೇ ಕಮ್ಮಿ ಬರ್ತಿತ್ತು... ಈಗ ಇನ್ನೂ ಕಮ್ಮಿ! ಏನು ಮಾಡದಂತ ಗೊತಾಗ್ತಾನೇ ಇಲ್ಲ' ಎಂದಳು ಕಳವಳದಿಂದ. ಎಲ್ಲವನ್ನು ಕೇಳಿಸಿಕೊಳ್ಳುತ್ತಿದ್ದ ಫಾತಿಮಾ ಬಂಡೆಯೊಂದು ತಲೆಗಪ್ಪಳಿಸಿದಂತೆ ಮಾತು ಕಳೆದುಕೊಂಡಳಾದರೂ, 'ಯಾ ಅಲ್ಲಾಹ್' ಎಂಬ ಉದ್ಗಾರವೊಂದು ಬಾಯಿಂದ ಹೊರಹೊಮ್ಮಿತು. ಅಲ್ಲೇ ಕೊಠಡಿಯಲ್ಲಿದ್ದ ಅವಳ ಸೊಸೆ, 'ಎಲ್ಲಿಯವಳಂತೆ ಆ ಚಿನಾಲಿ?' ಎಂದು ಕ್ರುದ್ಧಳಾಗಿ ಕೇಳಿದಾಗ. 'ಹೊಳೇನರಸೀಪುರದವಳಂತೆ. ಹೋಗಿತ್ತಲ್ಲ ನುಮ್ದು ಮಿಯಾ... ಅಲ್ಲೇ ಎರಡು ವರ್ಷ ಇತ್ತಲ್ಲ' ಎಂದಳು ಕ್ರೋಧದಿಂದ. 'ಎಲ್ಲ ನಮ್ದು ಬದ್ನಸೀಬಿ' ಎಂದು ಮುಳುಮುಳನೆ ಅತ್ತಳು. 'ನಿಮ್ದು ಬೇಟಿಗೆ ನಿಕಾಹ್ ಆಗಿದೆ. ಅವ್ರಿದ್ದಾಗಲೇ ಮಾಡಿದ್ರು. ನಮ್ಮ ಗುಲ್ಲೂಗೆ ನಾಹೆಂಗೆ ನಿಕಾ ಮಾಡಲಿ? ಇಷ್ಟು ಕಡಿಮೆ ಆದಾಯದಲ್ಲಿ?' ಎಂದು ಕಣ್ಣೊರೆಸಿಕೊಂಡಳು. 'ನಿಂಜೊತೆ ನಿಕಾ ಆದಾಗ್ಲು ನಂಗೆ ಹಂಗೇ ಅನ್ಸಿತ್ತು' ಎಂದು ಹಳೆಯ ಕಹಿಯನ್ನು ಕಾರಿಕೊಂಡ ಹಿರಿಯಳ ಮಾತಿಗೆ ಕಿರಿಯವಳು ದುರ್ದಾನ ತೆಗೆದುಕೊಂಡವಳಂತೆ ಎದ್ದು, 'ನಾನು ಹೊರಡ್ತೀನಿ ಮನೇಲಿ ಗುಲ್ಲೂ ಒಬ್ಬಳೇ ಇದಾಳೆ. ಅಮ್ಜದ್ ಊರಲಿಲ್ಲ. ನಮ್ಮಣ್ಣನ ಮನೇಗೋಗಿದಾನೆ' ಎಂದಳು.

'ಐ ಹಂಗ್ಯಾಕೆ ಸಿಟ್ಟು ಮಾಡ್ಕೋತೀಯ... ಇರು, ಇಲ್ಲೇ ಊಟ ಮಾಡಿ ಹೋಗ್ತೀಯಂತೆ. ಅವರಿಲ್ಲ ಅಂಥ ನಾವು ಚೆನ್ನಾಗಿರಬೇಡವ? ಆಮೇಲೆ ಫಯಾಜ್ ಬಿಟ್ಟು ಬರ್ತಾನೆ. ಎಂಟು ಗಂಟೆಗೆಲ್ಲ ಮನೆಗೆ ಬರ್ತಾನೆ' ಎಂದು ಒತ್ತಾಯಿಸಿ ನಿಲ್ಲಿಸಿಕೊಂಡಳು. ಊಟದ ಜೊತೆಗೇ ಬಿಚ್ಚಿಕೊಂಡ ಮಾತುಗಳಲ್ಲಿ ಇಬ್ಬರೂ ತಮ್ಮ ಒಬ್ಬನೇ ಪತಿಯ ಕುರಿತು ತಮಗಿದ್ದ ಅಸಮಾಧಾನ ತೋಡಿಕೊಂಡರು.

ಫಾತೀಮಾ, 'ಅಲ್ಲ ನಸ್ರೀನ್... ಅದೆಂಗೆ ನಮ್ಮಿಬ್ಬರಿಗೂ ಇದು ಗೊತ್ತಾಗದೆ ಹೋಯ್ತು ಅಂತ... ನಾನೇನೋ ವಯಸ್ಸಾದೋಳು ಸೂಕ್ಷ್ಮ ಇಲ್ಲ ಅಂತ್ಲೆ ಇಟ್ಕೋ... ನಿಂಗಾದ್ರು ಗೊತ್ತಾಗಿಲ್ಲವಲ್ಲ!' ಎಂದಾಗ, 'ಮಹಾಚಾಲಾಕಿ ಮನುಷ್ಯ ನಮ್ದು ಮಿಯಾ! ಇಬ್ರ ಕಣ್ಣಿಗೂ ಮಣ್ಣೆರೆಚಿದ್ದಾರೆ. ಹೆಂಗೆ ಗೊತ್ತಾಗಬೇಕು ನೀವೇ ಹೇಳಿ ಆಪಾ... ಅವ್ರು ವರ್ಷಗಟ್ಲೆ ಬೇರೆ ಊರಲ್ಲಿದ್ರೆ ನಮ್ಗೆ ಹೆಂಗೆ ತಿಳಿಬೇಕು? ಹೆಂಗೂ ಅವ್ರು ನರಸೀಪುರದಲ್ಲಿದ್ದಾಗ ನಾನು ಅಲ್ಲೆ ಎರಡು ಸಾರಿ ಹೋಗಿದ್ದೆ. ಮನೇಲಿ ಅವರೊಬ್ರೆ... ಒಂದು ಸೀರೇನೋ, ಬಳೇನೋ, ಬುರ್ಕಾನೋ ಹೆಂಗಸ್ರ ಚಪ್ಲೀನೋ ಇದ್ರೆ ಗೊತ್ತಾಗುತ್ತೆ. ಏನೂ ಇರಲಿಲ್ಲ. ಮಾಮೂಲಿ ಕೆಲಸಕ್ಕಾಗಿ ಹೋಗಿ ಸಂಜೆ ಬರೋರು. ನಂಗೂ ಏನೂ ಅನುಮಾನ ಬರ್ಲಿಲ್ಲ' ಎಂದಳು.

'ಅಂತೂ ಇಬ್ರ ಕಣ್ಣಿಗೂ ಮಣ್ಣೆರೆಚಿದ್ದಾರೆ' ಎಂದ ಫಾತಿಮಾಳ ಮಾತಿಗೆ ಒಂದು ನಿಮಿಷ ಮೌನ ತಳೆದು, 'ಏನೇ ಹೇಳಿ ಆಪ... ಒಬ್ಬ ಗಂಡಸಿಗೆ ನಾಕು ಮದುವೆ ಯಾಕೆ ಬೇಕು ನೀವೇ ಹೇಳಿ? ಶರೀಯತ್ತಲ್ಲಿ ಅದಕ್ಕೆ ಅವಕಾಶ ಇರೋದ್ರಿಂದಾನೆ ಇವರು ಹಿಂಗೆ